## ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾದಃ ನ್ಯಾಯಾಲಯಃ ನ.ರಾ.ಪುರ.

**ಅಸಲು ದಾವಾ ಸಂಖ್ಯೆ ಃ 19/2020**

ಸಾಕ್ಷಿದಾರರ ಹೆಸರು ಃ ಚಂದ್ರಮೌಳಿ

ತಂದೆಯ ಹೆಸರು ಃ ಆನಂದ ಕೃಷ್ಣಪ್ಪ

**ಪಿ.ಡಬ್ಲ್ಯೂ- 2**

ವಯಸ್ಸು ಃ **44** ವರ್ಷ

ಉದ್ಯೋಗ ಃ ಸರ್ವೇಯರ್

ವಾಸಸ್ಥಳ ಃ ಶಿವಮೊಗ್ಗ

**ದಿನಾಂಕಃ 31.07.2024 ರಂದು ಪ್ರಮಾಣವಚನ ಬೋಧಿಸಲಾಯಿತು.**

ಃಃ ಸಾಕ್ಷಿ ವಿಚಾರಣೆ ಃ ವಾದಿ ಪರಃಶ್ರೀ. ಹೆಚ್ ಎ ಎಸ್ ವಕೀಲರಿಂದಃಃ

ಈಗ್ಗೆ ಸುಮಾರು 2014 ರಿಂದ 2021 ರವರೆಗೆ ನಾನು ನ ರಾ ಪುರ ತಾಲ್ಲೂಕು ಕಚೇರಿಯಲ್ಲಿ ಸರ್ವೇಯರ್ ಆಗಿ ಕೆಲಸ ಮಾಡುತ್ತಿದ್ದೆ.

ಈ ದಾವೆಯಲ್ಲಿ ನನಗೆ ನ್ಯಾಯಾಲಯದಿಂದ ಸಾಕ್ಷಿ ನುಡಿಯಲು ಸಮನ್ ಬಂದಿರುತ್ತದೆ. ನಿಡಿ-8 ನಕಾಶೆಯನ್ನು ನಾನು ಮತ್ತು ಅರಣ್ಯ ಇಲಾಖೆಯವರು ಜಂಟಿಯಾಗಿ ಮಾಡಿರುತ್ತೇವೆ. ನಿಡಿ-8 ನಕಾಶೆಯಲ್ಲಿ ನಿಡಿ-8(ಎ) ಸರ್ವೆ ನಂಃ 155 ರಲ್ಲಿ 5 ಎಕರೆ ಎಂದು ನಾನು ಗುರುತಿಸಿರುತ್ತೇನೆಂದರೆ ಸರಿ. ಸದರಿ 5 ಎಕರೆ ಜಮೀನಿನ ಪೂರ್ವಕ್ಕೆ ಸರ್ವೆ ನಂಃ 155, ಪಶ್ಚಿಮಕ್ಕೆ ಸರ್ವೆನಂಃ 136, ಉತ್ತರಕ್ಕೆ ಸರ್ವೆ ನಂಃ 155, ದಕ್ಷಿಣಕ್ಕೆ ಸರ್ವೆ ನಂಃ 127 ಎಂದು ತೋರಿಸಿರುತ್ತೇನೆಂದರೆ ಸರಿ. ಸದರಿ ನಕಾಶೆಯನ್ನು ನಾನು ಮತ್ತು ಅರಣ್ಯಾಧಿಕಾರಿಗಳು ಮಾಡಿರುತ್ತೇವೆ. ನಿಡಿ-19 ನಕಾಶೆಯನ್ನು ನಾನು ಮಾಡಿರುತ್ತೇನೆಂದರೆ ಸರಿ. ಸದರಿ ನಕಾಶೆ ಗೈರು ವಿಲೇ ಕಡತ ಆಗಿದ್ದು, ಅದಕ್ಕೆ ನಕಾಶೆ ಇರುವುದಿಲ್ಲ. ಸದರಿ ಪ್ರದೇಶವನ್ನು ಸ್ವಾಧೀನ ಅನುಭವದ ಆಧಾರದ ಮೇಲೆ ನಕಾಶೆ ಮಾಡಲಾಗುತ್ತದೆ ಎಂದು ನುಡಿಯುತ್ತಾರೆ. ಸದರಿ ನಿಪಿ-19 ಕ್ಕೆ ಎ ಡಿ ಎಲ್ ಆರ್ ರವರ ಸಹಿ ಇರುತ್ತದೆ ಎಂದರೆ ಸರಿ. ಸದರಿ ಸಮಯದಲ್ಲಿ ಅವರು ಇರುವುದಿಲ್ಲ, ನಾನು ನಕಾಶೆ ಮಾಡಿ ಅವರಿಗೆ ನೀಡಿರುತ್ತೇನೆಂದು ನುಡಿಯುತ್ತಾರೆ. ತಹಶೀಲಾರ್ ಆದೇಶದಂತೆ ನಿಪಿ-19 ಸ್ವಾಧೀನಾನುಭವದ ಪ್ರಕಾರ ಮಾಡಿ ತೋರಿಸಿರುತ್ತೇನೆಂದರೆ ಸರಿ. ನಿಪಿ-19 ರಲ್ಲಿ ತೋರಿಸಿರುವ ಪ್ರದೇಶವು ನಿಡಿ-8 ರಲ್ಲಿ 8(ಎ) ಆಗಿರುತ್ತದೆ.

ಃಮರುವಿಚಾರಣೆ ಇಲ್ಲಃ

**(ದಿನಾಂಕಃ 31.07.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ